**OS. No 16/2015**
**D.W-1**

**( ದಿನಾಂಕ.09-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** ಶ್ರೀ. P.N.S ವಕೀಲರಿಂದ

7 ನೇ ಪ್ರತಿವಾದಿ ಮಲ್ಲಮ್ಮ ನನ್ನ ತಾಯಿ ಇರುತ್ತಾಳೆ ಎಂದರೆ ಸರಿ. 7 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬರಬಹುದು ಮತ್ತು ಮಾತನಾಡುತ್ತಾಳೆ. ವಾದಿ ನನ್ನ ಸೋದರ ಮಾವ ಅಂದರೆ ನನ್ನ ತಾಯಿಯ ಅಣ್ಣ ಇರುತ್ತಾನೆ. ಶಿವಣ್ಣ ತಂದೆ ಚಂದ್ರಶಾ ನನ್ನ ತಾಯಿಯ ಪೂರ್ವಜ ಎಂದರೆ ಸರಿ. ಚೋಳಮ್ಮ ಅಂದರೆ 4 ನೇ ಪ್ರತಿವಾದಿ ನನ್ನ ತಾಯಿಯ ತಾಯಿ ಎಂದರೆ ಸರಿ. ನನ್ನ ಅಜ್ಜ ಶಿವಣ್ಣನಿಗೆ 4 ಜನ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಎಂದರೆ ಸರಿ. ಅವರೆಂದರೆ ದತ್ತಾತ್ತೇಯ, ಶಿವಲಿಂಗಪ್ಪ, ಚಂದ್ರಕಾಂತ ಮತ್ತು ನಾಗಪ್ಪ ಇರುತ್ತಾರೆ ಹಾಗೂ ಹೆಣ್ಣು ಮಗಳು ನನ್ನ ತಾಯಿ ಮಲ್ಲಮ್ಮ ಇರುತ್ತಾಳೆ.

1 ನೇ ಪ್ರತಿವಾದಿ ಹೆಂಡತಿ ಹೆಸರು ಗುರುಬಾಯಿ ಎಂದರೆ ಸರಿ. 1 ನೇ ಪ್ರತಿವಾದಿಗೆ ರಾಜಶೇಖರ ಮತ್ತು ಸಂತೋಷಿ ಎಂಬ ಇಬ್ಬರು ಮಕ್ಕಳು ಎಂದರೆ ಸರಿ ಹಾಗೂ ಅವರುಗಳು 2 ಮತ್ತು 3 ನೇ ಪ್ರತಿವಾದಿಯರು ಇರುತ್ತಾರೆ ಎಂದರೆ ಸರಿ. ನನ್ನ ಅಜ್ಜ ಶಿವಣ್ಣರವರಿಗೆ 72 ಎಕರೆ ಮಾಡ್ಯಾಳ ಗ್ರಾಮದಲ್ಲಿ ಜಮೀನುಗಳಿದ್ದು, ಕಲಬುರುಗಿಯ ಸಿದ್ದೇಶ್ವರ ಕಲ್ಯಾಣ ಮಂಟಪದ ಹಿಂದುಗಡೆ ವಾದಿ ಹೆಸರಿನಲ್ಲಿ ಒಂದು ಮನೆ ಇರುತ್ತದೆ ಮತ್ತು ಕಲಬುರುಗಿಯ ನಗರದಲ್ಲಿ ಎರಡು ನಿವೇಶನಗಳು ಇರುತ್ತವೆ.

ಭೂಸನೂರ ಸರಹದ್ದಿನಲ್ಲಿ ವಾದಿ ಮತ್ತು ಅವಳ ಹೆಂಡತಿಯಾದ ಲಲಿತಾಬಾಯಿ ಹೆಸರಿನಲ್ಲಿ ಸುಮಾರು 5 ಎಕರೆ ಜಮೀನು ಇರುತ್ತದೆ.

ನನ್ನ ಅಜ್ಜ ಶಿವಣ್ಣ ತಮ್ಮ ಜೀವತಕಾಲದಲ್ಲಿ ಸರ್ವೇ ನಂಬರ 433 ಹಾಗೂ 434 ಗಳನ್ನು ಖರೀದಿ ಮಾಡಿರುತ್ತಾರೆ. ನನ್ನ ಅಜ್ಜ ಶಿವಣ್ಣ ಖರೀದಿ ಮಾಡಿರುತ್ತಾನೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ನನ್ನ ಅಜ್ಜ ಶಿವಣ್ಣ ತನ್ನ ಹೆಸರಿನಲ್ಲಿ ಯಾವುದೇ ಆಸ್ತಿಗಳನ್ನು ಖರೀದಿ ಮಾಡಿಲ್ಲ, ಆದರೆ ಅವರ ಮಕ್ಕಳ ಹೆಸರಿನಲ್ಲಿ ಖರೀದಿ ಮಾಡಿರುತ್ತಾನೆ. ದಾವಾ A ಶೆಡ್ಯೂಲನಲ್ಲಿ ತೋರಿಸಿದ ಎಲ್ಲ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸಾಕ್ಷಿ ಮುಂದುವರೆದು ಕೆಲವೊಂದು ಆಸ್ತಿಗಳನ್ನು ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳಿರುವಂತೆ ಕೆಲವೊಂದು ಆಸ್ತಿಗಳನ್ನು ಬಿಟ್ಟಿರುತ್ತಾರೆಂದು ಹೇಳಿದ್ದು, ಸದರಿ ಎಲ್ಲ ಬಿಟ್ಟಿರುವ ಆಸ್ತಿಗಳು ಶಿವಣ್ಣನ ಮರಣಾನಂತರ ಖರೀದಿಸಿದ ಸ್ವತ್ತುಗಳಾಗಿರುತ್ತವೆ ಎಂದರೆ ಸರಿ.

ವಾದಿ ಮತ್ತು ಆತನ ಹೆಂಡತಿಯಾದ ಲಲಿತಾಬಾಯಿರವರು ತಮ್ಮ ಸ್ವಂತ ಹಣದಿಂದ ನಾನು ಕೈಬಿಟ್ಟಿರುವ ಆಸ್ತಿಗಳು ಎಂದು ಹೇಳಲಾದ ಸ್ವತ್ತುಗಳನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲ ಆಸ್ತಿಗಳು ಕುಟುಂಬದ ಆದಾಯದಿಂದ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ.

ವಾದಿ ಮತ್ತು ಆತನ ಹೆಂಡತಿಯಾದ ಲಲಿತಾಬಾಯಿಯವರು ಖರೀದಿ ಮಾಡುವ ಕಾಲಕ್ಕೆ ನಾನು ಮತ್ತು ನನ್ನ ತಾಯಿ ಅವರಿಗೆ ಹಣ ಕೊಟ್ಟಿರುತ್ತೇವೆ. ಎಷ್ಟು ಹಣ ಕೊಟ್ಟಿರುತ್ತೇವೆಂದು ನನಗೆ ನಿಖರವಾಗಿ ಗೊತ್ತಿಲ್ಲ, ತಾಯಿ ಮುಖಾಂತರ ಕೊಟ್ಟಿರುತ್ತೇವೆ, ಅದು ನನ್ನ ತಾಯಿಗೆ ಗೊತ್ತು. ಹಣ ಕೊಟ್ಟ ಬಗ್ಗೆ ವಾದಿ ಮತ್ತು ಆತನ ಹೆಂಡತಿಯಿಂದ ರಸೀದಿ ಪಡೆದಿಲ್ಲ. ನಗದು ಮುಖಾಂತರ ಕೊಟ್ಟಿರುತ್ತೇವೆ. ನಾನು ಮತ್ತು ನನ್ನ ತಾಯಿ ಇಬ್ಬರು ಕೂಡಿ ವಾದಿ ಮತ್ತು ಆತನ ಹೆಂಡತಿಯಾದ ಲಲಿತಾಬಾಯಿರವರಿಗೆ ಕೈ ಬಿಟ್ಟಿರುವ ಸ್ವತ್ತುಗಳನ್ನು ಖರೀದಿಸಲು ಅವರ ಅಣ್ಣ-ತಮ್ಮಂದಿರಾದ 1, 5 ಮತ್ತು 6 ನೇ ಪ್ರತಿವಾದಿಯರ ಸಮಕ್ಷಮ ಕೊಟ್ಟಿರುತ್ತೇವೆ ಎಂದು ಹೇಳುವುದು ಸುಳ್ಳು ಇದೆ ಎಂದರೆ ಸರಿಯಲ್ಲ.

ನನ್ನ ಅಜ್ಜನ ಸ್ವತ್ತುಗಳಲ್ಲಿ ಕಾನೂನಿನ ಪ್ರಕಾರ 5 ಹಿಸ್ಸೆ ಆಗಬೇಕು ಎಂದರೆ ಸರಿ. 5 ಹಿಸ್ಸೆ ಎಂದರೆ, 4 ಜನ ಗಂಡು ಮಕ್ಕಳಿಗೆ ಮತ್ತು ಒಂದು ಹೆಣ್ಣು ಮಗಳು ಅಂದರೆ ನನ್ನ ತಾಯಿಗೆ ಎಂದರೆ ಸರಿ. ನನ್ನ ತಂದೆ ಸೈದಪ್ಪ ಶಿವಣ್ಣರವರಿಗೆ ಬಾಹುಬಂಧ ಅಲ್ಲ, ಆದರೆ ಮಗಳ ಗಂಡ ಆಗಬೇಕು. ನನ್ನ ತಂದೆ ಸೈದಪ್ಪರವರಿಗೆ ಶಿವಣ್ಣನ ಆಸ್ತಿಯಲ್ಲಿ ಯಾವುದೇ ಪಾಲು ಇಲ್ಲ ಎಂದರೆ ಸರಿ. ಸರ್ವೇ ನಂಬರ. 337/2 ರಲ್ಲಿ 7 ಎಕರೆ 22 ಗುಂಟೆ ಜಮೀನು ಅಂದರೆ 11 ನೇ ಐಟಂ ಸ್ವತ್ತು ಶಿವಣ್ಣನ ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ.

ಸದರಿ ಐಟಂ ನಂಬರ 11 ರ ಸ್ವತ್ತು ಖರೀದಿ ವೇಳೆಯಲ್ಲಿ 1 ನೇ ಪ್ರತಿವಾದಿ ದತ್ತಾತ್ರೇಯರವರು ಸುಮಾರು 12 ವರ್ಷದ ವಯಸ್ಸಿನವರು ಇದ್ದರು ಎಂದರೆ ಸರಿ.

ಶಿವಣ್ಣ ಮತ್ತು ಸಿದ್ದಣ್ಣ ಇಬ್ಬರು ಖಾಸ ಅಣ್ಣ-ತಮ್ಮಂದಿರು ಎಂದರೆ ಸರಿ. ಆ ಪೈಕಿ ಸಿದ್ದಣ್ಣವರಿಗೆ ಯಾರು ಇಲ್ಲ ಹಾಗೆ ಮರಣ ಹೊಂದಿರುತ್ತಾರೆ ಎಂದರೆ, ಸಾಕ್ಷಿ ಶಿವಣ್ಣ, ಸಿದ್ದಣ್ಣ ಮತ್ತು ಶರಣಪ್ಪ 3 ಜನ ಅಣ-ತಮ್ಮಂದಿರು, ಆ ಪೈಕಿ ಶರಣಪ್ಪ ಮದುವೆಯಾಗದೇ ಹಾಗೂ ಯಾವುದೇ ವಾರಸುದಾರರು ಇಲ್ಲದೇ ತೀರಿಕೊಂಡಿರುತ್ತಾರೆ. ಸಿದ್ದಣ್ಣರವರಿಗೆ ಮಕ್ಕಳು ಇರುತ್ತಾರೆ. ಸರ್ವೇ ನಂಬರ 337 ರ ಸ್ವತ್ತು 15 ಎಕರೆ 15 ಗುಂಟೆ ಜಮೀನು ಏಕತ್ರ ಜಮೀನು ಎಂದರೆ, ಸಾಕ್ಷಿ ಸಿದ್ದಣ್ಣರವರು ಖರೀದಿಸಿದ ಸ್ವತ್ತು ಎಂದು ನುಡಿಯುತ್ತಾರೆ. ಶಿವಣ್ಣ ಮತ್ತು ಸಿದ್ದಣ್ಣ ಬೇರೆಯಾದ ನಂತರ ಖರೀದಿ ಮಾಡಿರುತ್ತಾರೆ. ಅವರು ಬೇರೆಯಾಗಿದ್ದು ನನಗೆ ಗೊತ್ತಿರುತ್ತದೆ. ಆ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಸರ್ವೇ ನಂಬರ 337 ರ ಜಮೀನು ಶಿವಣ್ಣರವರ ಏಕತ್ರ ಕುಟುಂಬದ ಜಮೀನು ಅಂದರೆ ಸರಿಯಲ್ಲ.

ನನ್ನ ಅಜ್ಜ ಶಿವಣ್ಣ 1997-98 ರಲ್ಲಿ ತೀರಿಕೊಂಡಿರುತ್ತಾರೆ. ಸರ್ವೇ ನಂಬರ 337 ರ ಜಮೀನನನ್ನು ನನ್ನ ತಂದೆ ಸೈದಪ್ಪನ ಹೆಸರಿನಲ್ಲಿ 1 ನೇ ಪ್ರತಿವಾದಿ ದತ್ತಾತ್ರೆಯರವರ ಮುಖಾಂತರ ಮೇಲೆ ಹೇಳಿದ ಸಿದ್ದಣ್ಣ ತಂದೆ ಚಂದ್ರಶೇಖರ ಕಲಶೆಟ್ಟಿರವರ ಮುಖಾಂತರ ನನ್ನ ತಂದೆಗೆ ದಾನಪತ್ರ 1981-82 ರಲ್ಲಿ ಮಾಡಿರುತ್ತಾರೆ.

**D.W-1**

1 ನೇ ಪ್ರತಿವಾದಿ ದತ್ತಾತ್ರೇಯರವರು ನನ್ನ ತಂದೆಗೆ ದಾನಪತ್ರ ಮಾಡಿದ್ದು ಬರಹ ರೂಪದಲ್ಲಿ ಇದೆ. ಸದರಿ ದಾಖಲೆ ನೋಂದಣಿಯಾಗಿರುತ್ತದೆ. ಸದರಿ ದಾಖಲೆಯನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಸಾಕ್ಷಿ ಎಲ್ಲ ದಾಖಲೆಗಳನ್ನು ನೋಡಿ ನಿಡಿ-5 ರಲ್ಲಿ ಆ ಬಗ್ಗೆ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಆದರೆ ನೋಂದಣಿಯಾದ ದಾನಪತ್ರದ ಪ್ರತಿ ನಾವು ಉಪನೋಂದಣಿ ಕಚೇರಿಯಲ್ಲಿ ಕೇಳಿರುತ್ತೇವೆ, ಅವರು ಇಲ್ಲ ಎಂದು ಬರೆದುಕೊಟ್ಟಿರುತ್ತಾರೆ. ಸದರಿ ದಾನಪತ್ರ ನೋಂದಣಿಯಾಗಿರುತ್ತದೆ ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಮುಂದೆ ಹಾಜರುಪಡಿಸುತ್ತೇನೆ.

ನಿಡಿ-5 ರಲ್ಲಿ ದಾನಪತ್ರದ ದಸ್ತಾವೇಜು ನಂಬರ ಬರೆದಿರುವುದಿಲ್ಲ, ಮುಂದೆ ನಾನು ಉಪನೋಂದಣಿ ಕಚೇರಿಯಿಂದ ತಂದು ಹಾಜರುಪಡಿಸುತ್ತೇನೆ. ನನ್ನ ತಂದೆ ಸೈದಪ್ಪರವರಿಗೆ ಆದ ದಾನಪತ್ರ ನೋಂದಣಿಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಹಾಗೂ ನಾನು ಹೇಳುವಂತಹ ಯಾವುದೇ ದಾನಪತ್ರವಾಗಿಲ್ಲ ಎಂದರೆ ಸರಿಯಲ್ಲ. ನಿಡಿ-5 ರ ದಾಖಲೆಯನ್ನು ಗ್ರಾಮ ಲೆಕ್ಕಾಧಿಕಾರಿ ಜೊತೆ ಮಿಲಾಪೆಯಾಗಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-5 ರ ದಾಖಲೆ ಮತ್ತು ಅದರ ಮೇಲೆ ಸೈದಪ್ಪ ಹೆಸರಿನಲ್ಲಿ ಮಾಡಿದ RTC ಕೂಡಾ ಸುಳ್ಳು ಎಂದರೆ ಸರಿಯಲ್ಲ. ನಿಡಿ-5 ರ ಸ್ವತ್ತಿನಲ್ಲಿ ಇವತ್ತಿಗೂ ಕೂಡಾ ಶಿವಣ್ಣರವರ ವಾರಸುದಾರರಾದ 5 ಜನ ಜಂಟೀ ಕಬ್ಜಾದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

**OS. No 16/2015**

**D.W-1**

ಶಿವಣ್ಣರವರು ತಮ್ಮ ಜೀವಿತ ಕಾಲದಲ್ಲಿ ಯಾವತ್ತು ಕೂಡಾ ತನ್ನ 5 ಜನ ಮಕ್ಕಳಿಗೆ ದಾವಾ ಸ್ವತ್ತುಗಳಲ್ಲಿ ಹಂಚಿಕೆ ಮಾಡಿಲ್ಲ ಎಂದರೆ ಸರಿ. ಅದೇ ರೀತಿ ಯಾವುಕದೇ ರೀತಿ ಹಂಚಿಕೆ ಪತ್ರ ಇರುವುದಿಲ್ಲ ಎಂದರೆ ಸರಿ. ಶಿವಣ್ಣರವರು ತೀರಿಕೊಂಡ ನಂತರ ಅವರ 5 ಜನ ಮಕ್ಕಳು ಜಂಟೀ ಕುಟುಂಬ ಕಬ್ಜಾದಲ್ಲಿ ಬಂದಿರುತ್ತಾರೆ ಎಂದರೆ ಸರಿ. ಶಿವಣ್ಣರವರು ಮರಣಾನಂತರ ಅವರ 5 ಜನ ಮಕ್ಕಳಲ್ಲಿ ಇವತ್ತಿನವರೆಗೂ ಯಾವುದೇ ರೀತಿ ಹಂಚಿಕೆಯಾಗಿಲ್ಲ ಎಂದರೆ ಸರಿ. ಶಿವಣ್ಣರವರು ಮರಣಾನಂತರ 1 ನೇ ಪ್ರತಿವಾದಿಯೇ ಕುಟುಂಬದ ಪ್ರಮುಖ ವ್ಯಕ್ತಿ ಹಾಗೂ ಅವರೇ ಕುಟುಂಬದ ಉಸ್ತುವಾರಿ ಮಾಡಿಕೊಂಡು ಹೋಗುತ್ತಾರೆ ಎಂದರೆ ಸರಿ. ನನ್ನ ಪ್ರಕಾರ ನನ್ನ ತಾಯಿಗೂ ದಾವಾ ಸ್ವತ್ತುಗಳಲ್ಲಿ 1/5 ನೇ ಹಿಸ್ಸಾ ಇರುತ್ತದೆ ಎಂದರೆ ಸರಿ. ಅದೇ ಪ್ರಕಾರ ವಾದಿಗೂ ಕೂಡಾ 1/5 ನೇ ಹಿಸ್ಸೆ ಇರುತ್ತದೆ ಎಂದರೆ, ಸಾಕ್ಷಿ ಕಾನೂನು ಪ್ರಕಾರ ಅವರಿಗೂ ಕೂಡಬೇಕಾಗುತ್ತದೆ ಎಂದು ನುಡಿಯುತ್ತಾರೆ.

ವಾದಿ ಚಿಕ್ಕವನಿರುವಾಗಿನಿಂದಲು ಶಿಕ್ಷಣ ಸಲುವಾಗಿ ಮಾಡ್ಯಾಳ ಗ್ರಾಮದಿಂದ ಹೊರಗೆ ಇರುತ್ತಾರೆ ಎಂದರೆ ಸರಿ. ವಾದಿ ಕಳೆದ 30 ವರ್ಷಗಳಿಂದ ಸರಕಾರಿ ನೌಕರಿಯಲ್ಲಿ ಇದ್ದಾರೆಂದರೆ ಸರಿ. ವಾದಿ ಇವತ್ತಿಗೂ ಕೂಡಾ A.E ಅಂತ PWD ಕಚೇರಿಯಲ್ಲಿ ಕರ್ತವ್ಯ ಮಾಡುತ್ತಿದ್ದಾರೆಂದರೆ ಸರಿ. ವಾದಿ ತನ್ನ ನೌಕರಿಯಲ್ಲಿ ಇದ್ದಾಗ ಸಾಲ ಪಡೆದುಕೊಂಡು ನಿವೇಶನ ಖರೀದಿಸಿದ ಬಗ್ಗೆ ಗೊತ್ತಾ ಎಂದು ಕೇಳಿದ ಪ್ರಶ್ನೆಗೆ, ಸಾಕ್ಷಿ ಅವರೇನು ಸಾಲ ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ.

**OS. No 16/2015**
**D.W-1**

ನಿಪಿ-34 ರ ಪ್ರಕಾರ ವಾದಿ SBI ಕಲಬುರುಗಿಯಲ್ಲಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿ 2020 ರಲ್ಲಿ ದಾವಾ ಆದ ನಂತರ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ 2002 ರಲ್ಲಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ವಾದಿ ಸದರಿ ಸಾಲವನ್ನು ತಮ್ಮ ವೇತನದ ಮುಖಾಂತರ ಕಟ್ಟುತ್ತಾ ಬರುತ್ತಾ ಇರುತ್ತಾರೆಂದರೆ ಸರಿ. ವಾದಿ ತಾನು ಪಡೆದು ಕೊಂಡ 10 ಲಕ್ಷದಲ್ಲಿ ಕಟ್ಟಡವನ್ನು ಕೂಡಾ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಕಲಬುರುಗಿಯಲ್ಲಿ ಕೊಂಡುಕೊಂಡು ನಿವೇಶನ ಮತ್ತು ಕಟ್ಟಿದ ಮನೆ ವಾದಿಯ ಸ್ವಯಾರ್ಜಿತ ಸ್ವತ್ತಿನಿಂದ ಕೊಂಡುಕೊಂಡಿದ್ದು ಮತ್ತು ಕಟ್ಟಿದ್ದು ಇರುತ್ತದೆ ಎಂದರೆ ಸರಿಯಲ್ಲ. ನಾವು ಮತ್ತು 1 ನೇ ಪ್ರತಿವಾದಿ, 5 ಮತ್ತು 6 ನೇ ಪ್ರತಿವಾದಿಗಳು ಕೂಡಿಕೊಂಡು ದಾವಾ ಸ್ವತ್ತುಗಳಲ್ಲಿ ವಾದಿಗೆ ಏನು ಕೊಡಬಾರದು ಹಾಗೂ ಆತ ಕೊಂಡುಕೊಂಡ ಸ್ವತ್ತುಗಳನ್ನು ಕಬಳಿಸಬೇಕೆಂಬ ದುರದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**